**ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ**

**(ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ)**

**ಹೆಚ್ಚುವರಿ ಅಧಿಸೂಚನೆ**

**ಸಂಖ್ಯೆ : ಲೋಇ 112 ಇಎಪಿ 2012(ಪಿ1) ಬೆಂಗಳೂರು, ದಿನಾಂಕ : 23-12-2015.**

ಕರ್ನಾಟಕ ಹೆದ್ದಾರಿ ಕಾಯ್ದೆ 1964 ಕಲಂ 15ರ ಮೇರೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳು ಹುಬ್ಬಳ್ಳಿ ಶಹರದಲ್ಲಿ ಹೆಚ್‌ಡಿಬಿಆರ್‌ಟಿಎಸ್ ಯೋಜನೆಯ ಪೂರಕ ಸೌಕರ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು (ರಾಜ್ಯ ಹೆದ್ದಾರಿ ಪ್ರಾಧಿಕಾರ) ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಜಮೀನು ಹೆಚ್‌ಡಿಬಿಆರ್‌ಟಿಎಸ್ ಯೋಜನೆಯ ಪೂರಕ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸದರಿ ಕ್ಷೇತ್ರವನ್ನು ಭೂಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯಕವಾಗಿದೆ ಎಂದು ಸರ್ಕಾರವು ಮನಗಂಡಿದೆ. ಆದುದರಿಂದ ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ 1964ರ ಅಡಿಯಲ್ಲಿ ಈ ಕೆಳಕಂಡ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿ

ಅಥವಾ ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು (ರಾಜ್ಯ ಹೆದ್ದಾರಿ ಪ್ರಾಧಿಕಾರ) ಪರವಾಗಿ ಪ್ರತಿನಿಧಿಸುವವರನ್ನು ತಡೆಯುವುದಾಗಲಿ ಅಥವಾ ಅಡ್ಡಿಪಡಿಸುವುದಾಗಲಿ ಮಾಡಕೂಡದೆಂದು ಈ ಜಮೀನುಗಳಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಈ ಅಧಿಸೂಚನೆ ಪ್ರಕಟಣೆಯಾದ ನಂತರ ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು (ರಾಜ್ಯ ಹೆದ್ದಾರಿ ಪ್ರಾಧಿಕಾರ) ರವರ ಅನುಮತಿಯಿಲ್ಲದೇ ಸದರಿ ಜಮೀನುಗಳನ್ನು ವಿಲೆ ಮಾಡುವ ಒಪ್ಪಂದದ ಕ್ರಯ, ಕರಾರು, ಭೋಗ್ಯ, ಲೀಜ್, ಅದಲು ಬದಲು ವಗ್ಯೆರೆ ಮಾಡುವಂತಿಲ್ಲ. ಸದರಿ ಜಮೀನುಗಳಲ್ಲಿ ಈ ಅಧಿಸೂಚನೆ ಪ್ರಕಟಣೆಯ ನಂತರ ಕಟ್ಟಡಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಒಂದು ವೇಳೆ ಮಾಡಿದ್ದರೂ ಪರಿಹಾರ ಹಣ ನಿಗದಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಸದರಿ ಜಮೀನುಗಳ ವಿವರಗಳನ್ನು ಪರಿಶೀಲನೆಗಾಗಿ ವಿಶೇಷ ಭೂಸ್ವಾಧೀನಾಧಿಕಾರಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ರಾಯಾಪುರ ಧಾರವಾಡ ಮತ್ತು ಕಾರ್ಯಪಾಲಕ ಇಂಜಿನಿಯರ್ ಕೆಆರ್‌ಡಿಸಿಎಲ್, ಯೋಜನಾ ಕಛೇರಿ ಹುಬ್ಬಳ್ಳಿ ಮತ್ತು ಹುಬ್ಬಳ್ಳಿ ತಹಶೀಲ್ದಾರ್‌ರವರ ಕಛೇರಿಯಲ್ಲಿ ಇಡಲಾಗಿದೆ.

| ಅ. ಸ. | ಖಾತೆದಾರರ ಹೆಸರು (ಪ್ರಾಪರ್ಟಿ ಕಾರ್ಡ ಪ್ರಕಾರ) | ಸಿ.ಟಿ.ಎಸ್ ನಂ. | ಪ್ರಾಪರ್ಟಿ ಕಾರ್ಡ ಪ್ರಕಾರ ಜಮೀನಿನ ಒಟ್ಟು ವಿಸ್ತೀರ್ಣ | ತರಹೆ (ಶೇತ್ಕಿ ಬಿನ್ ಶೇತ್ಕಿ/ವಸತಿ/ ವಾಣಿಜ್ಯ | ಆಕಾರ | | ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರ | ಚಕ್ಕಬಂದಿ | | | | ಶರಾ |
|---|---|---|---|---|---|---|---|---|---|---|---|---|
| | | | | | ರೂ. | ಪೈ. | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| **ಗ್ರಾಮ : ಎಂ. ತಿಮ್ಮಸಾಗರ (ಹುಬ್ಬಳ್ಳಿ ಶಹರ)** | | | | | | | | | **ಜಿಲ್ಲೆ : ಧಾರವಾಡ** | | | |
| 1 | ಹೋಲ್ಡರ್ : ಸರ್ಕಾರ (ಹುಬ್ಬಳ್ಳಿ ಮುನ್ಸಿಪಲ್ ಬರೋ, ಹುಬ್ಬಳ್ಳಿ) | 122/1ಎ ವಾರ್ಡ್ ನಂ. 3, (ರಿ.ಸ.ನಂ. 77) | 1259 4/9 ಚ.ಯಾರ್ಡ (38ಎ, 33ಗುಂ) | ಮುನಿಶಿಪಾಲಿಟಿ (ತಿರಕಾರಾಯನ ಕೆರೆ) | – | – | 7149.21 ಚ.ಮೀ. (1ಎ, 31 ಗುಂ) | ಉಳಿದ ಜಮೀನು | ರಸ್ತೆ | ರಸ್ತೆ | ಉಳಿದ ಜಮೀನು | ಸದರಿ ಜಮೀನಿನಲ್ಲಿ ಪ್ರಸ್ತುತ ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಹುಬ್ಬಳ್ಳಿ ಇವರಿಗೆ ಸೇರಿದ ಕಟ್ಟಡಗಳು ಇರುತ್ತವೆ. ಆದರೆ, ಪ್ರಾಪರ್ಟಿ ಕಾರ್ಡಿನಲ್ಲಿ ಸದರಿ ನಿಗಮದ ಹೆಸರು ದಾಖಲಿರುವುದಿಲ್ಲ. |
| | **ಒಟ್ಟು** | | | | | | **7149.21 ಚ.ಮೀ** | | | | | |

**ಕರ್ನಾಟಕ ಹೆದ್ದಾರಿ ಕಾಯ್ದೆ 1964 ಕಲಂ 15ರ ಕೆಳಗೆ**

**ಘೋಷ್ವಾರೆ**

| ಅ.ನಂ. | ಸಿಟಿಎಸ್ ನಂ. | ಗ್ರಾಮ/ನಗರ | ತಾಲ್ಲೂಕು | ಜಿಲ್ಲೆ | ಭೂಸ್ವಾಧೀನಕ್ಕೊಳಪಡುವ ಕ್ಷೇತ್ರ (ಚ.ಮೀ.ಗಳಲ್ಲಿ) |
|---|---|---|---|---|---|
| 1 | 122/1ಎ ವಾರ್ಡ ನಂ.3, (ರಿ.ಸ.ನಂ. 77) | ಎಂ.ತಿಮ್ಮಸಾಗರ (ಹುಬ್ಬಳ್ಳಿ ಶಹರ) | ಹುಬ್ಬಳ್ಳಿ | ಧಾರವಾಡ | 7149.21 |
| ಒಟ್ಟು ಕ್ಷೇತ್ರ | | | | | **7149.21** |

ಸಂಖ್ಯೆ : ಲೋಇ : 112 : ಇಎಪಿ : 2012(ಪಿ1)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಇಂ. ವಿಜಯ್. ಭೀ. ಚಂದಾಪುರ
ವಿಶೇಷಾಧಿಕಾರಿ
ಬಾಹ್ಯ ಅನುದಾನಿತ ಯೋಜನೆಗಳು (EAP)
ಲೋಕೋಪಯೋಗಿ, ಬಂದರು ಹಾಗು ಒಳನಾಡು ಜಲಸಾರಿಗೆ ಇಲಾಖೆ.

P.R. 1109
SC - 200